ಹೆಮ್ಮೆಯೂ, ಭವಿಷ್ಯದ ಬಗ್ಗೆ ಅದಮ್ಯ ಉತ್ಸಾಹವೂ ಉಂಟಾಯಿತು.

ಮುದ್ರೆಯನ್ನು ಬರೇ ವಿಮಾನಯಾನದಿಂದ ಹೊರಗಟ್ಟಿದ ಮಾತ್ರಕ್ಕೆ ಅದು ಅಧಿಕಾರದ ಪ್ರತೀಕವನ್ನು ಕಳೆದುಕೊಳ್ಳುತ್ತಿದೆ ಎನ್ನುವುದು ಹುಸಿ ವಾದ ಎನ್ನುವುದೂ ನನಗೆ ತಿಳಿಯಿತು. ದೊಡ್ಡ ಸೂಪರ್ ಮಾರ್ಕೆಟ್ಟುಗಳಲ್ಲಿ, ಈ ಡಿಲಿವರ್ಡ್ ಮುದ್ರೆಗಳಿವೆ. ಸಣ್ಣ ಗೂಡಂಗಡಿ ಹೋಟೆಲಿನಲ್ಲಿ ಕಚ್ಚಾ ಬಿಲ್ಲು ನೀಡುವಾಗ ಅದಕ್ಕೆ ಘನತೆ ಒದಗಿಸುವುದೇ ಈ ಮುದ್ರೆ. ಬ್ಯಾಂಕುಗಳ ನಗದು ವಿಭಾಗದಲ್ಲಿ ವಜನು ಕಡಿಮೆಯಾಗಿದ್ದರೂ ಚೌಕ ಮುದ್ರೆ ಮುಂದುವರೆಯುತ್ತಿದೆ. ಹಾಗೂ ದೊಡ್ಡ ಮೊಬಲಗಿನ ಚೆಕ್ಕನ್ನು ಜಮಾ ಮಾಡಬೇಕೆಂದಿದ್ದರೂ, ಡ್ರಾಪ್ ಬಾಕ್ಸಿನಲ್ಲಿ ಹಾಕದೇ ಅದಕ್ಕೊಂದು ಪುಟ್ಟ ರೌಂಡ್ ಸೀಲು ಹಾಕಿಸಿಕೊಳ್ಳುವುದು ಇಂದಿಗೂ ಸಾಧ್ಯವಿದೆ. ಒಂದು ಪುಟ್ಟ ತಂತ್ರಜ್ಞಾನದ ಮುದ್ರೆಯಿಂದ ಎಷ್ಟೆಲ್ಲಾ ಅಧಿಕಾರದ ಗತ್ತನ್ನು ಸಾಧಿಸಬಹುದು ನೋಡಿ.

ಈಗ ವಿಐಪಿಗಳ ಕಾರುಗಳಿಗೆ ಕೆಂಪು ಬತ್ತಿಯನ್ನೂ ತೆಗೆದು ಹಾಕಿದ್ದಾರೆ. ಅದು ಪರವಾಗಿಲ್ಲ. ಆದರೆ ದಿನವೂ ನಮ್ಮ ಘನತೆಯನ್ನು ಪುನರಾವರ್ತಿಸುವ, ಅಂಗಡಿಯಲ್ಲಿನ ಸೆಕ್ಯೂರಿಟಿಯವನಿಗೂ ಒಂದು ಅಧಿಕಾರದ ಗತ್ತನ್ನು ನೀಡುವ ಈ ಮುದ್ರೆಯ ಘನತೆಯನ್ನು ಕಮ್ಮಿ ಮಾಡುವ – ಅಧಿಕಾರ ಮುದ್ರೆಯನ್ನು ಕಿತ್ತೆಸೆಯುವ ಹುನ್ನಾರ ಮುಂದುವರೆದಿದೆ. ಇದನ್ನು ನಾವು ಈಗ ಎದುರಿಸಬೇಕಿದೆ. ವಿಮಾನಯಾನದಲ್ಲಿ ಮುದ್ರೆಯಿಲ್ಲ, ಐಡಿ ಕಾರ್ಡಿನಲ್ಲಿ ಮುದ್ರೆಯಿಲ್ಲ, ದಾಖಲೆ ಪತ್ರಗಳಿಂದ ಮಾಯವಾಗುತ್ತಿರುವ ಮುದ್ರೆಯನ್ನೂ ಕಾಪಾಡಬೇಕಿದೆ. ಇಂದು ಮುದ್ರೆಯಿಲ್ಲ ಎನ್ನುತ್ತಾರೆ. ನಾಳೆ ಆಧಾರ್ ಸಂಖ್ಯೆಯಿದ್ದರೆ ಪಾಸ್‌ಪೋರ್ಟೂ ಬೇಡವೆನ್ನುತ್ತಾರೆ. ನಾಡಿದ್ದು ಮುದ್ರೆಯನ್ನೇ ಬ್ಯಾನ್ ಮಾಡಿದರೆ ನಮ್ಮ ಅಂಚೆ ಇಲಾಖೆ ನಡೆಯುವುದಾದರೂ ಹೇಗೆ?

ಆದರೆ ನಮ್ಮ ಮುದ್ರಾ ಮನಃಸ್ಥಿತಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ನನ್ನ ಆತಂಕಕ್ಕೆ ಕಾರಣವಿದ್ದರೂ ಅದು ಹುಸಿ ಆತಂಕವಿರಬಹುದು. ಉದಾಹರಣೆಗೆ ನೋಡಿ, ಮೊನ್ನೆ ಎಲ್ಲೋ ನನ್ನನ್ನು ಐಡಿ ದಾಖಲೆ ಕೇಳಿದರು. ನಾನು ನಮ್ಮ ಸಂಸ್ಥೆಯ ಐಡಿ ನೀಡಿದೆ.

“ಇಲ್ಲ ಸರ್ ಸರಕಾರಿ ಐಡಿ ಬೇಕು” ಎಂದು ಕೇಳಿದ.

“ಅಪ್ಪಾ ನಾನು ಕೆಲಸಮಾಡುತ್ತಿರುವುದು ಸರಕಾರಿ ಸಂಸ್ಥೆಯಲ್ಲಿಯೇ. ನೋಡು” ಎಂದು ನನ್ನ ಸಂಸ್ಥೆಯ ಹೆಸರನ್ನು ತೋರಿಸಿದೆ. ಉಹುಂ. ಇಲ್ಲ. ಒಪ್ಪಲಿಲ್ಲ.

“ಸರ್ ಇದು ಸರಕಾರಿ ಐಡಿ ಪತ್ರವಲ್ಲ. ಇಲ್ಲಿ ನೋಡಿ ನನ್ನ ಐಡಿ ಪತ್ರ. ಇಲ್ಲಿ ಮೂಲೆಯಲ್ಲಿ ಒಂದು ರೌಂಡ್ ಸೀಲಿದೆ. ಅದು ಮುದ್ರಿತವಾದ ಮುದ್ರೆ. ಆದರೆ ಸೀಲು ರೌಂಡು ಇವಿಲ್ಲದಿದ್ದರೆ ಅದು ಸರಕಾರಿ ದಾಖಲೆ ಹೇಗಾಗುತ್ತದೆ. ಹೋಗಿ ನಿಮ್ಮ ಆಡಳಿತಾಧಿಕಾರಿಗಳಿಗೆ ಹೇಳಿ ಒಂದು ರೌಂಡ್ ಸೀಲು ಹಾಕಿಸಿ ತನ್ನಿ. ಅಲ್ಲಿಯವರೆಗೂ ನಿಮ್ಮ ಆಧಾರ್ ಕಾರ್ಡನ್ನು ಐಡಿಯಾಗಿ ಉಪಯೋಗಿಸಿ” ಎಂದು ಉಪದೇಶ ಮಾಡಿದ.

ಸರಿಯೆಂದು ಆಧಾರ್ ಪತ್ರ ತೆಗೆದೆ. ತಮಾಷೆಯೆಂದರೆ, ಆಧಾರ್‌ಗೆ ರೌಂಡ್ ಸೀಲಿಲ್ಲ. ಅದಕ್ಕಿರುವುದು ಒಂದು ಕ್ಯೂಆರ್ ಕೋಡು. ಅಧಿಕಾರದ ಕೋಡಿನ ಭವಿಷ್ಯ ಮುದ್ರೆಯಿಂದ ಕ್ಯೂಆರ್ ಕೋಡಿಗೆ ವರ್ಗವಾಗುತ್ತಿರಬಹುದೇ...

**ಎಂ.ಎಸ್. ಶ್ರೀರಾಮ್**

ಕತೆಗಾರ, ಪ್ರಬಂಧಕಾರ, ಅರ್ಥತಜ್ಞ ಶ್ರೀರಾಮ್ ಬೆಂಗಳೂರಿನವರು. ‘ಶನಿವಾರ ಸಂತೆ’, ‘ಕನಸು ಕಟ್ಟುವ ಕಾಲ’, ‘ತೇಲ್ ಮಾಲಿಶ್’, ‘ಅವರವರ ಸತ್ಯ’, ‘ಮಾಯಾದರ್ಪಣ’, ‘ಸಲ್ಮಾನ್ ಖಾನ್‌ನ ಡಿಫಿಕಲ್ಟೀಸು’ ಅವರ ಪ್ರಮುಖ ಪುಸ್ತಕಗಳು.